# ಹಸ್ತಲಾಘವದ ನಾಯಕಿ

ಹಸ್ತಲಾಘವ ಮಾಡುವುದು ಅವರು ಬಾಲ್ಯದಿಂದ ಕಲಿತ ಶಿಷ್ಟಾಚಾರ. ಅದಕ್ಕೆ ಬೇರೆ ಯಾವ ಅರ್ಥ ಕಲ್ಪಿಸುವುದೂ ಬೇಕಿಲ್ಲ. ಹಾಗೆಂದು ಅವರೇ ತುಂಟತನದಿಂದ ಹೇಳಿ, ಬಗಲಲ್ಲಿ ಇದ್ದವರಿಗೆ ಹಸ್ತಲಾಘವ ಮಾಡುತ್ತಿದ್ದರು. ಅಂಗೈ ಬೆಚ್ಚಗಿದೆಯೋ, ಶೀತ ಪ್ರಕೃತಿಯವರೋ ಎಂದು ನಿಸ್ಸಂಕೋಚವಾಗಿ ಹೇಳುವಷ್ಟು ಬಿಂದಾಸ್.

ಮಂಗಳೂರು ಸ್ವಂತ ಊರು. ಬೆಂಗಳೂರು ಕಲಿತ ಊರು. ಚೆನ್ನೈ ಅದೃಷ್ಟ ಪರೀಕ್ಷೆಗೆ ಒಳಗಾದ ಊರು. ಸೌಂದರ್ಯ ಸ್ಪರ್ಧೆಯ ಮೋಹಕ್ಕೆ ಬಿದ್ದ ಅವರು ಮೊದಲು ಸ್ಪರ್ಧೆಯಲ್ಲಿ ಗೆದ್ದರು. ರ‍್ಯಾಂಪ್‌ನಿಂದ ಅಭಿನಯ ಲೋಕಕ್ಕೆ ಜಿಗಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಕ್ಯಾಮೆರಾ ಎದುರಿಸಲು ತುಸುವೂ ಭಯವಿರಲಿಲ್ಲ. ತಮಿಳಿನಲ್ಲಿ ಮೊದಲು ಎರಡು ಚಿತ್ರಗಳ ಅವಕಾಶ ಸಿಕ್ಕಿತು. ಎರಡೂ ಸೋತದ್ದೇ ಬೆಂಗಳೂರಿಗೇ ಮರಳುವುದು ಅನಿವಾರ್ಯವಾಯಿತು.

ಆಗ ಅವಕಾಶ ಸಿಕ್ಕಿ, ಸೋತದ್ದಷ್ಟೇ ಬಹುತೇಕರಿಗೆ ಗೊತ್ತಾದದ್ದು. ಮಾಡೆಲ್ ಆಗಿ ಮೆರೆದದ್ದು ಕ್ಷಣಿಕ. ನಟಿಯಾಗಲು ಹೋಗಿ ಅನುಭವಿಸಿದ್ದು ನರಕ. ತುತ್ತೂಟಕ್ಕೂ ಆಗ ತತ್ವಾರ. ಬನ್ ತಿಂದು, ಚಹಾ ಕುಡಿದು ದಿನಗಳನ್ನು ಕಳೆದದ್ದಿದೆ. ಬೆಂಗಳೂರಿನ ಪ್ರತಿಷ್ಠಿತ ಕಾಲೇಜಿನಲ್ಲಿ ಕಲಿತ ಹುಡುಗಿಗೆ ಆ ದಿನಗಳು ಸುಲಭದ್ದಾಗಿರಲಿಲ್ಲ. ನಟಿಯಾಗುವ ಹೆಬ್ಬಯಕೆಯಿಂದ ಸಂಪ್ರದಾಯದ ಬೇಲಿಗಳನ್ನು ಕಿತ್ತುಹಾಕಿ ಆಗಿತ್ತು. ಚುಂಬನ ಹಾಗೂ ಹಸಿಬಿಸಿ ದೃಶ್ಯಗಳಲ್ಲಿ ಅಭಿನಯಿಸುವುದಿಲ್ಲ ಎಂದು ಹೇಳುವುದು ಸಾಧ್ಯವಿಲ್ಲದ ಜಮಾನ ಇದು. ಅಭಿನಯದ ಗೀಳಿಗೆ ಬಿದ್ದಿದ್ದ ನಟಿ ಮಹತ್ವಾಕಾಂಕ್ಷೆಯ ಜೊತೆಗೆ ಕಷ್ಟಗಳನ್ನೂ ಉಜ್ಜುತ್ತಿದ್ದುದನ್ನು ನಗುನಗುತ್ತಲೇ ನೆನಪಿಸಿಕೊಂಡಿದ್ದರು; ಮತ್ತೊಂದು ಹಸ್ತಲಾಘವದ ಜೊತೆಗೆ.

ಮೊದಲ ಕನ್ನಡ ಚಿತ್ರದಲ್ಲಿ ನಟಿಸಿದ್ದ ಪುಲಕದ ಜೊತೆಗೆ ಅವರ ನಿರ್ಭಿಡೆಯ ನೋಟ ಕಂಡು ಅನೇಕರು ಬೋಲ್ಡ್ ಆದದ್ದಿದೆ. ಸಿನಿಮಾದಲ್ಲಿ ಅವಕಾಶಕ್ಕೆ ಕಾಯುವವರ ಜೊತೆಗೆ ಅವಕಾಶವಾದಿಗಳೂ ಇರುತ್ತಾರೆ ಎನ್ನುವ ಸತ್ಯ ನಟಿಗೆ ಗೊತ್ತಿತ್ತು. ಹೀಗಿದ್ದ ನಟಿಗೆ ದಿಢೀರನೆ ಕೆಲವು ಅವಕಾಶಗಳು ಸಿಕ್ಕವು. ಕಟ್ಟುಮಸ್ತು ನಟನೊಬ್ಬನ ಸಲಿಗೆಯೂ ಸಿಕ್ಕಿತು. ಇಬ್ಬರ ಅನ್ಯೋನ್ಯತೆಯನ್ನು ಸೆಟ್‌ನಲ್ಲೇ ಕಂಡು ನಿರ್ದೇಶಕರೊಬ್ಬರು ಗರಂ ಆದರು. ನಟ–ನಟಿಯ ಸಲುಗೆಯೇ ವಿವಾದವಾಗಿ, ಟೀವಿ ವಾಹಿನಿಗಳಿಗೆ ಟಿಆರ್‌ಪಿ ಹೆಚ್ಚಿಸಿಕೊಳ್ಳುವ ವಸ್ತುವೂ ಆಯಿತು.

ಇಷ್ಟೆಲ್ಲ ಆದರೂ ನಟಿ ತನ್ನಿಷ್ಟದ ಅಭಿನಯದಿಂದ ಮಾತ್ರ ವಿಮುಖವಾಗಲಿಲ್ಲ. ಈಗಲೂ ಅವರು ಆಪ್ತರೆನ್ನಿಸಿದವರು, ಹಿತೈಷಿಗಳು ಎದುರಲ್ಲಿ ಸಿಕ್ಕರೆ ಅದೇ ಭಾವದಲ್ಲಿ ಹಸ್ತಲಾಘವ ಮಾಡುತ್ತಾರೆ. 'ಶುಭವಾಗಲಿ' ಎಂದು ಹಾರೈಸುತ್ತಾರೆ. 'ನನ್ನ ಮನಸ್ಸಿನಂತೆ ದೇಹವೂ ಈಗ ದೊಡ್ಡದಾಗಿದೆ' ಎಂದು ಒಮ್ಮೆ ಅವರು ನಕ್ಕಿದ್ದನ್ನಂತೂ ಮರೆಯಲಾಗದು.

● **ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68